ಪಡಬೇಕಾದವರು ಯಾರು? ಇಲ್ಲೆಲ್ಲ ನಾವು ಗಮನಿಸಬೇಕಾದ್ದು ಇಂಗಿತಜ್ಞಾನದ ಕೊರತೆ. ಕಾವ್ಯಧರ್ಮದ ಸಂದರ್ಭದಲ್ಲಂತೂ ಈ ಗುಣದ ಪ್ರಯೋಜನ ಎಷ್ಟೆಂದು ಮನವರಿಕೆಯಾಗುತ್ತದೆ. 'ಅವಳ ಮುಖ ಚಂದ್ರನಂತಿದೆ' ಎಂದರೆ ನಾವು ಆ ಮಾತನ್ನು ಹೇಗೆ ಅರ್ಥೈಸಿಕೊಳ್ಳಬೇಕು? ಇದನ್ನು ಅರ್ಥೈಸಿಕೊಳ್ಳುವುದರಿಂದಲೇ ನಾವು ಸಹೃದಯರೋ ಅಲ್ಲವೋ ಎನ್ನುವುದು ತಿಳಿದುಹೋಗುತ್ತದೆ. 'ಚಂದ್ರನಂತೆ ಮುಖ' ಎಂದರೆ 'ಚಂದ್ರನಲ್ಲಿರುವ ಕುಳಿಯಂತೆ' ಎಂದೂ ಅಲ್ಲ, ಅಥವಾ 'ಅಮಾವಾಸ್ಯೆಯ ಚಂದ್ರನಂತೆ ಅದೃಶ್ಯಸ್ಥಿತಿ' ಎಂದೂ ಅಲ್ಲವಷ್ಟೆ! ಹೀಗೆ ಯಾರಾದರೂ ಅರ್ಥ ಮಾಡಿಕೊಂಡರೆ ಅಂಥವರಿಗೆ ಕಾವ್ಯಧರ್ಮವೂ ಗೊತ್ತಿಲ್ಲ; ಕಾವ್ಯವನ್ನು ಸವಿಯುವ ಅರ್ಹತೆಯೂ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. 'ಹುಣ್ಣಿಮೆಯ ಚಂದ್ರನಂತೆ ಮುಖ ದುಂಡಾಗಿದೆ', 'ಅದನ್ನು ನೋಡಿದವರ ಮನಸ್ಸು ಆಹ್ಲಾದಕಾರಿಯಾಗುತ್ತದೆ' – ಎನ್ನುವುದು ಆ ಮಾತಿನ ಅರ್ಥ. ಹೀಗೆ ಅರ್ಥ ಮಾಡಿಕೊಂಡವನೇ ನಿಜವಾದ ಸಹೃದಯ; ಅವನಿಗಷ್ಟೆ ಕಾವ್ಯವನ್ನು ಆಸ್ವಾದಿಸಬಲ್ಲ ಯೋಗ್ಯತೆ ಒದಗಿದೆ ಎನ್ನುವುದು ಸ್ಪಷ್ಟ. ಈ ಅನ್ವಯವಿಸ್ತರಣತತ್ತ್ವವು ಕಾವ್ಯದಿಂದ ಹಿಡಿದು ರಾಜಕೀಯದ ವರೆಗೂ, ತತ್ತ್ವಶಾಸ್ತ್ರದಿಂದ ಹಿಡಿದು ಪಾಕಶಾಸ್ತ್ರದ ತನಕ ಎಲ್ಲೆಲ್ಲೂ ಸಲ್ಲುವಂಥದ್ದೇ ಹೌದು. 'ಸಂವಿಧಾನದ ಪ್ರಕಾರ ನಾನು ಈ ದೇಶದ ಪ್ರಜೆ' ಎಂದು ಹಕ್ಕನ್ನು ಚಲಾಯಿಸುವಾಗ, ಅದೇ ಸಂವಿಧಾನ ಕರ್ತವ್ಯವನ್ನೂ ವಿಧಿಸಿದೆ ಎಂದೂ ಮರೆಯಬಾರದು. 'ಉಪ್ಪಿಗಿಂತ ರುಚಿಯಿಲ್ಲ' ಎನ್ನುವುದು ಸರಿಯೇ; ಉಪ್ಪಿಲ್ಲದಿದ್ದರೆ ಅಡುಗೆಗೆ ರುಚಿಯೇ ಒದಗದು; ದಿಟವೇ. ಹೀಗೆಂದು ಒಂದು ಹಿಡಿ ಉಪ್ಪನ್ನು ನಾಲ್ಕು ಸೌಟಿನಷ್ಟು ಸಾರಿಗೆ ಸುರಿದರೆ?! ಇಲ್ಲೆಲ್ಲ ಬೇಕಾದದ್ದು ಇಂಗಿತಜ್ಞಾನ. ಡಿವಿಜಿಯವರಂತೂ ಸುಸಂಸ್ಕೃತನ ಪಂಚಲಕ್ಷಣಗಳಲ್ಲಿ 'ಪರೇಂಗಿತಪರಿಜ್ಞಾನ'ವನ್ನೂ ಒಂದಾಗಿ ಎಣಿಸಿದ್ದಾರೆ.

ತತ್ತ್ವಶಾಸ್ತ್ರ, ಎಂದರೆ ಅಮೂರ್ತವಾದ ಅರಿವನ್ನು ಕುರಿತು ಮಾತನಾಡುವಾಗ ಬಹಳ ಎಚ್ಚರಿಕೆಯಿಂದ ವ್ಯವಹರಿಸಬೇಕಾಗುತ್ತದೆ. ಅದರ ಎಷ್ಟೋ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ವಿಶೇಷ ಪರಿಣತಿ ಬೇಕಾಗುತ್ತದೆ; ಕೇವಲ ವಾಚ್ಯಾರ್ಥವನ್ನಷ್ಟೆ ಹಿಡಿದು ನಾವು ಕುತರ್ಕಕ್ಕೆ ವಶವಾದರೆ ಏನೇನೂ ಪ್ರಯೋಜನವಿರದು. ಉದಾಹರಣೆಗೆ ವೇದದ ಮಾತೊಂದನ್ನು ಇಲ್ಲಿ ನೋಡಬಹುದು. 'ಪುರುಷಸೂಕ್ತ'ದ ಸೊಲ್ಲೊಂದು ಹೀಗಿದೆ: 'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷ ಸಹಸ್ರಪಾತ್'. ಪುರುಷನಿಗೆ, ಎಂದರೆ ದೇವರಿಗೆ ಸಾವಿರ ತಲೆಗಳು, ಸಾವಿರ ಕಣ್ಣುಗಳು, ಸಾವಿರ ಪಾದಗಳು – ಎಂದು ಇದರ ವಾಚ್ಯಾರ್ಥ. ಆದರೆ, ಇದು ನಮ್ಮ ಸಾಮಾನ್ಯಜ್ಞಾನಕ್ಕೂ ನಿತ್ಯಾನುಭವಕ್ಕೂ ವಿಪರೀತವಾದ ಅರ್ಥ. 'ಸಾವಿರ ತಲೆಗಳು' ಇದ್ದರೆ ಎರಡು ಸಾವಿರ ಕಣ್ಣುಗಳು, ಎರಡು ಸಾವಿರ ಪಾದಗಳು ಇರಬೇಕಾದದ್ದು ನಮ್ಮ ಲೋಕಾನುಭವ. ಇದಕ್ಕೆ ವಿರುದ್ಧವಾಗಿದೆ ವೇದದ ಮಾತು. ಹಾಗಾದರೆ ಇದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು? ಇಲ್ಲಿ 'ಸಹಸ್ರ' ಎಂದರೆ ಅನಂತ; ಅದನ್ನು 'ಸಾವಿರ'ಕ್ಕೆ ಮಿತಗೊಳಿಸಿ ಅರ್ಥಮಾಡುವುದು ನಮ್ಮ ಅಲ್ಪಮತಿಯ ತರ್ಕವಷ್ಟೆ! 'ಅನಂತ' ಎಂದರೆ 'ಎಲ್ಲೆಲ್ಲೂ', 'ಎಲ್ಲ ಕಾಲದಲ್ಲೂ', 'ಎಲ್ಲರಲ್ಲೂ' – ಎಂದು ತಾತ್ಪರ್ಯ. 'ಎಲ್ಲೆಲ್ಲೂ ದೇವರಿದ್ದಾನೆ' ಎಂದರೆ ಆನೆಯಲ್ಲಿ ಮಾತ್ರವಲ್ಲ, ಮಾವುತನಲ್ಲೂ ದೇವರಿದ್ದಾನೆ ಎಂದೇ ಅರ್ಥ. ಆದರೆ, ಅದನ್ನು ಅರ್ಥ ಮಾಡಿಕೊಳ್ಳಲು ಸೋತಿದ್ದ ಆ ದಡ್ಡ ಹುಡುಗ!